**ಸಿ.ಸಿ.ನಂ.647/2014**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

**ದಿನಾಂಕ: 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಆರೋಪಿ ಪರ** ಶ್ರೀ ಟಿ ಆರ್ ಎಸ್ **ವಕೀಲರಿಂದ.**

ಚಿಕ್ಕಮಗಳೂರಿನ ಜಿಲ್ಲಾ ಸಹಕಾರಿ ಸಂಘದ ಕಛೇರಿಯು ಆಡಿಟ್ ರಿಪೋರ್ಟ ಮಾಡಲು ಎಸ್ ನಾರಾಯಣ ಬಿನ್ ಸೀತಾನಾಯ್ಕರವರಿಗೆ ಸಹಕಾರ ಸಂಘದ ಲೆಕ್ಕ ಪರಿಶೋಧಕರಿಗೆ ಆದೇಶ ನೀಡಿರುತ್ತಾರೆಂದರೆ ಸಾಕ್ಷಿ ಆ ಆದೇಶವನ್ನು ನನಗೆ ತೋರಿಸಿರುವುದಿಲ್ಲ, ಹಾಗಾಗಿ ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಸ್ ನಾರಾಯಣ್ ರವರು ಸದರಿ ಆದೇಶದ ಮೇರೆಗೆ ವರದಿಯನ್ನು ನೀಡಿರುತ್ತಾರೆಂದರೆ ಸಾಕ್ಷಿ ನಾನು ಅದನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರಿದು, ಅದನ್ನು ನನಗೆ ತೋರಿಸಿಲ್ಲ, ಅದಕ್ಕೂ ಮುಂಚೆ ನಾವು ಆರೋಪಿಯ ಮೇಲೆ ದೂರು ದಾಖಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಎಸ್ ನಾರಾಯಣರವರು ಆರೋಪಿ ಆನಂದ್ ರವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಸೂಚಿಸಿ ನಿಮಗೂ ಹಾಗೂ 2 ನೇ ಆರೋಪಿಗೆ ಸೂಚಿಸಿ ವರದಿ ನೀಡಿರುತ್ತಾರೆಂದರೆ ಸಾಕ್ಷಿ ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ವರದಿಯನ್ನು ಚಿಕ್ಕಮಗಳೂರು ಜಿಲ್ಲಾ ಸಹಕಾರ ಸಂಘಗಳ ಉಪ ನಿರ್ದೇಶಕರ ಕಛೇರಿಗೆ ಕಳುಹಿಸಿರುತ್ತಾರೆ ಮತ್ತು ಬಾವಿಕೆರೆ ನಿಮ್ಮ ಸೊಸೈಟಿಗೂ ಸಹ ವರದಿಯನ್ನು ಕಳುಹಿಸಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ವರದಿಯನ್ನು ನೀವೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ದಿ: 24-05-2013 ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ತರೀಕೆರೆ ಮತ್ತು ಸಹಕಾರ ಅಬಿವೃದ್ದಿ, ಅಧಿಕಾರಿ ಕಡೂರು ಇವರಿಗೆ ಆರೋಪಿಯಾದ ಆನಂದ್ ರವರು 2 ಲಕ್ಷ ಹಣವನ್ನು ನಾನೇ ದುರುಪಯೋಗಪಡಿಸಿಕೊಂಡಿರುತ್ತೇನೆಂದು ಒಪ್ಪಿಕೊಂಡು ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸಂಸ್ಥೆಯಲ್ಲಿ ಯಾರೇ ಆಗಲೀ ಹಣವನ್ನು ದುರುಪಯಾಗ

ಮಾಡಿಕೊಂಡಲ್ಲಿ ವರದಿಯನ್ನು ಪಡೆಯದೇ ಅವರ ಮೇಲೆ ಕ್ರಮ ಕೈಗೊಳ್ಳಲು ಅಗುವುದಿಲ್ಲ ಎಂದರೆ ಸರಿ.

1 ನೇ ಆರೋಪಿಯು ನಿಮ್ಮ ಸಂಘದಲ್ಲಿ 2 ಲಕ್ಷದ 20 ಸಾವಿರದ 137 ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ಅದನ್ನು ವಸೂಲಾತಿಗಾಗಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ನಿಮಗೂ ಹಾಗೂ 2 ನೇ ಆರೋಪಿಗೆ ಆದೇಶ ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಮಾತ್ರ ಆದೇಶ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಆದೇಶವನ್ನು ದಿಃ 16-12-2013 ರಂದು ನೀವು ಸ್ವೀಕರಿಸಿರುತ್ತಿರಾ ಎಂದರೆ ಸರಿ. ಸಂಘದಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಸಮಯದಲ್ಲಿ ಅವರೇನಾದರೂ ಹಣವನ್ನು ದುರುಪಯೋಗ ಮಾಡಿಕೊಂಡಲ್ಲಿ ಅದಕ್ಕೆ ಭದ್ರತೆಗಾಗಿ ಜಾಮೀನು ಕರಾರು ಪತ್ರವನ್ನು ಅವರ ಸಂಬಂಧಿಕರಿಂದ ಪಡೆದುಕೊಂಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸದರಿ ವಿಷಯವಾಗಿ 1 ನೇ ಆರೋಪಿಯ ತಾಯಿಯು 1 ನೇ ಆರೋಪಿಗೆ ಎನ್ ಸಿ ಕುಮಾರ್ ಬಿನ್ ಚೆನ್ನೇಗೌಡರವರಿಗೆ ಭದ್ರತೆ ನೀಡಿದ್ದು, ಆ ಸಂಬಂಧ ನಿವೇಶನ ಅಸಸ್ ಮೆಂಟ್ ನ್ನು ನೀಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ದಿಃ 21-10-2013 ರಂದು ನಿವೇಶನದ ಅಸಸ್ ಮೆಂಟ್ ನೀಡುವಂತೆ ಪಂಚಾಯಿತ ಅಭಿವೃದ್ದಿ ಅಧಿಕಾರಿಗಳಿಗೆ 2 ನೇ ಆರೋಪಿ ಮನವಿ ಪತ್ರ ನೀಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನೀವು ದಿಃ 18-12-2013 ರಂದು ಪೊಲೀಸರಿಗೆ ದೂರು ನೀಡಿರುತ್ತಿರಾ ಎಂದರೆ ಸರಿ. ಅದಕ್ಕೂ ಮುಂಚೆ 2 ನೇ ಆರೋಪಿಯು 1 ನೇ ಆರೋಪಿ ವಿರುದ್ದ ಕಾನೂನು ಕ್ರಮ ಕೈಗೊಳ್ಳಲು ನಿವೇಶನದ ಅಸಸ್ ಮೆಂಟ್ ಪಡೆಯಲು ಮನವಿ ಪತ್ರವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿದ್ದಾರೆಂದರೆ ಸಾಕ್ಷಿ ಇರಬಹುದು ಆದರೆ ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. 2 ನೇ ಆರೋಪಿಯು 1 ನೇ ಆರೋಪಿ ವಿರುದ್ದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಉಪ ವಿಭಾಗ ತರೀಕೆರೆ ಇವರ ಮುಂದೆ ದಾವ ಸಂಖ್ಯೆ 1/2014-15 ರಲ್ಲಿ ದಿನಾಂಕಃ 28-10-2013 ರಂದು ಹಣ ವಸೂಲಾತಿಗೆ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸದರಿ ದಾವೆಯು ದಿಃ 20-10-2014 ರಂದು ಆದೇಶ ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸದರಿ ದಾವ ಸಲ್ಲಿಸಿದ ನಂತರ ಅದರಲ್ಲಿ ಆದೇಶ ಬರುವ ಮುಂಚೆ ಅಟ್ಯಾಚ್ ಮೆಂಟ್ ನ ಆದೇಶ ಪಾರ್ವತಮ್ಮನವರ ಖಾಲಿ ನಿವೇಶನದ ಮೇಲೆ ಆಗಿರುತ್ತದೆ ಎಂದರೆ

ಸಾಕ್ಷಿ ಆರೋಪಿಯ ಜವಾಬ್ದಾರಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. 2 ನೇಆರೋಪಿ 1 ನೇ ಆರೊಜೇಪಿ ಹಣ ದುರುಪಯೋಗಪಡಿಸಿಕೊಂಡಿರುವ ವಿಚಾರವಾಗಿ 1 ನೇ ಆರೋಪಿಗೆ ನೀಡಿದ ಜಾಮೀನುದಾರರಾದ ಪಾರ್ವತಮ್ಮ,ಎನ್ ಸಿ ಕುಮಾರ್, ರಾಧಮಣಿ ಇವರಿಗೆ ದಿಃ 01-09-2013 ರಲ್ಲಿ ನೋಟೀಸು ನೀಡಿದ್ದರು ಎಂದರೆ ಸಾಕ್ಷಿ ಅದು 2 ನೇ ಆರೋಪಿಯ ಜವಾಬ್ದಾರಿಯಾದ ಕಾರಣ ಅವರು ಮಾಡಿರುತ್ತಾರೆಂದು ನುಡಿದಿರುತ್ತಾರೆ.

1 ನೇ ಆರೋಪಿಯು ದಿನಾಂಕಃ 27-12-2012 ರಂದು 24,000/- ಹಣವನ್ನು ನಿಮ್ಮ ಸಂಘಕ್ಕೆ ಜಮಾ ಮಾಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. 1 ನೇ ಆರೋಪಿಯು ಸ್ವಲ್ಪ ಹಣವನ್ನು ನಿಮ್ಮ ಸಂಘಕ್ಕೆ ಜಮಾ ಮಾಡಿದ್ದು, ಉಳಿದ ಹಣವನ್ನು ಸಹ ಜಮಾ ಮಾಡುತ್ತೇನೆ ನನ್ನನ್ನು ಕೆಲಸಕ್ಕೆ ಮರುನೇಮಕ ಮಾಡಿಕೊಳ್ಳಿ ಎಂದು ನಿಮಗೆ ಅರ್ಜಿ ನೀಡಿರುತ್ತಾರೆಂದರೆ ಸಾಕ್ಷಿ ಅರ್ಜಿ ನಮಗೆ ತಲುಪಿರುವುದಿಲ್ಲ ಎಂದು ನುಡಿದಿರುತ್ತಾರೆ. ದಿಃ 10-10-2012 ರಂದು 1 ನೇ ಆರೋಪಿಯು 80 % ಹಣವನ್ನು ನಾನು ಜಮಾ ಮಾಡಿದ್ದ, ಉಳಿದ ಹಣವನ್ನು ಮೂರು ದಿನಗಳಲ್ಲಿ ಜಮಾ ಮಾಡುತ್ತೇನೆಂದು ತನ್ನನ್ನು ಕೆಲಸಕ್ಕೆ ಪುನಃ ನೇಮಕ ಮಾಡಿಕೊಳ್ಳಿ ಎಂದು ನಿಮಗೆ ಮತ್ತು ಕಾರ್ಯದರ್ಶಿಯವರಿಗೆ ಮನವಿ ಪತ್ರ ನೀಡಿರುತ್ತಾರೆಂದರೆ ಸಾಕ್ಷಿ ನಮಗೆ ಯಾವುದೇ ಅರ್ಜಿ ತಲುಪಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಮನವಿ ಪತ್ರದಲ್ಲಿ ನಾನು ಷರಾ ಬರೆದಿರುತ್ತೇನೆಂದರೆ ಸರಿ. ದಿಃ 29-11-2013 ರಂದು 2 ನೇ ಆರೋಪಿಯು 1 ನೇ ಆರೋಪಿಯ ವಿರುದ್ದ ಸರ್ಚ ವಾರೆಂಟನ್ನು ಸಹ ಪಡೆದಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2 ನೇ ಆರೋಪಿಯು 1 ನೇ ಆರೋಪಿಯ ವಿರುದ್ದ ಎಲ್ಲಾ ಕ್ರಮವನ್ನು ನೀವು ದೂರು ಸಲ್ಲಿಸುವ ಮುಂಚೆ ಕೈಗೊಂಡು ಅವರ ಕರ್ತವ್ಯವನ್ನು ನೆರವೇರಿಸಿರುತ್ತಾರೆಂದರೆ ಸಾಕ್ಷಿ ನನಗೆ ತಿಳಿಸಿರುವುದಿಲ್ಲ ಹಾಗೂ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಲ್ಲಾ ದಾಖಲಾತಿಗಳನ್ನು ನಿಮ್ಮ ಕಛೇರಿಯಿ ಲ್ಲಿ ಇದ್ದು, ಅದನ್ನು ನೀವು ಪರಿಶೀಲಿಸಿರುತ್ತಿರಾ ಎಂದರೆ ಸಾಕ್ಷಿ ನಾನು ಯಾವುದನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳನ್ನು ನಾನು ಸೆಕರೆಟರಿಯಿದ ಸರ್ಟಿಫೀಕೇಟ್ ಕಾಪಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ಈ ಎಲ್ಲಾ ದಾಖಲಾತಿಗಳನ್ನು ಮರೆಮಾಚಿ ನಿಮಗೆ ಬೇಕಾದ ಕೆಲವು ದಾಖಲಾತಿಗಳನ್ನು ಪಡೆದುಕೊಂಡು 2ನೇ ಆರೋಪಿ ಮೇಲೆ ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸಾಕ್ಷಿ ನಾನು ಸದರಿ ದಾಖಲಾತಿಗಳನ್ನು ಗಮನಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಲ್ಲಾ ದಾಖಲಾತಿಗಳನ್ನು ದೂರು ನೀಡುವ ಮುಂಚೆ ನಾನು ಕೇಳಲಾಗಿದ್ದು, ಸಿ ಇ ಒ ಆದ 2ನೇ ಆರೋಪಿ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. 2ನೇ ಆರೋಪಿಯು ನಿಮಗೆ ದಾಖಲಾತಿಯನ್ನು ನೀಡಿಲ್ಲದ ವಿಚಾರವನ್ನು ನಿಮ್ಮ ದೂರಿನಲ್ಲಿ ತಿಳಿಸಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ದಾಖಲಾತಿಗಳನ್ನು ಕೇಳಲು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಸಂಘದಲ್ಲಿ ಜನರಲ್ ಬಾಡಿ ಮೀಟಿಂಗ್ ನಲ್ಲಿ 1ನೇ ಆರೊಪಿ ಹಣ ದುರುಪಯೋಗಪಡಿಸಿಕೊಂಡಿದ್ದು, ಅವರ ಮೇಲೆ ಕ್ರಮ ಕೈಗೊಳ್ಳಲು ಆದೇಶ ಆಗಿತ್ತು, 2ನೇ ಆರೋಪಿಯ ಮೇಲೆ ಕ್ರಮ ಕೈಗೊಳ್ಳಲು ಆದೇಶ ಆಗಿರುವುದಿಲ್ಲ ಎಂದರೆ ಸಾಕ್ಷಿ ಅವರು ಸಿ ಇ ಒ ಆಗಿದ್ದು, ಅವರ ಮೇಲೆ ಸಹ ಕ್ರಮಕೈಗೊಂಡಿರುತ್ತೇವೆಂದು ನುಡಿದಿರುತ್ತಾರೆ. 2ನೇ ಆರೋಪಿಯು 1ನೇ ಆರೋಪಿಯ ಮೇಲೆ ಎಲ್ಲಾ ರೀತಿಯ ಕ್ರಮ ಕೈಗೊಂಡಿದ್ದು, 2ನೇ ಆರೋಪಿಯನ್ನು ನಿಮಗೆ ಕಂಡರೆ ಆಗದ ಕಾರಣ ಅವರ ಮೇಲೆ ಸುಳ್ಳು ದೂರನ್ನು ಸಲ್ಲಿಸಿದ್ದಿರಾ ಎಂದರೆ ಸರಿಯಲ್ಲ. ನೀವು 1,30,000/- ರೂ ಹಣವನ್ನು ಸಾಲವಾಗಿ ಯಾವುದೇ ದಾಖಲಾತಿ ಇಲ್ಲದೆ ಸಂಸ್ಥೆಯಿಂದ ಪಡೆದಿದ್ದು, ಅವರಿಂದ ತಪ್ಪಿಸಿಕೊಳ್ಳಲು 2ನೇ ಆರೋಪಿಯಿಂದ ದೂರನ್ನು ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ. ನಿಮಗೆ ಸದರಿ ಹಣವನ್ನು ಪಾವತಿ ಮಾಡಲು ದೇವಸ್ಥಾನದ ಕಡೆಯಿಂದ ನೋಟೀಸು ಕಳುಹಿಸಲಾಗಿತ್ತು ಎಂದರೆ ಸಾಕ್ಷಿ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. ನೀವು 1,30,000/- ರೂ ಹಣವನ್ನು ವಾಪಸ್ಸು ನೀಡದೇ ಮೋಸ ಮಾಡದೇ ಸದರಿ ಹಣವನ್ನು 2ನೇ ಆರೋಪಿಯು ಅವರೇ ಕೈಯಿಂದ ಸಂಘಕ್ಕೆ ಕಟ್ಟಿದ್ದು, ಇದರಿಂದ ನೀವು ತಪ್ಪಿಸಿಕೊಳ್ಳಲು 2ನೇ ಆರೋಪಿಯನ್ನು ಸಹ ದೋಷಿಯನ್ನಾಗಿ ಮಾಡಿ ದೂರು ನೀಡಿರುತ್ತಿರಾ ಎಂದರೆ ಸರಿಯಲ್ಲ.

1ನೇ ಆರೋಪಿಯು ಹಣವನ್ನು ಲಪಾಟಯಿಸಿದ್ದ, 2ನೇ ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ, ಎಲ್ಲಾ ವರದಿಯಲ್ಲೂ 1ನೇ ಆರೋಪಿ ಹಣವನ್ನು ದುರುಪಯೋಗ

ಮಾಡಿಕೊಂಡಿದ್ದು, ಅವರ ಮೇಲೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ, 2ನೇ ಆರೋಪಿಯ ಮೇಲೆ ಯಾವುದೇ ದೋಷವಾಗಲೀ, ಆರೋಪ ಆಗಲಿ ಇರದಿದ್ದರೂ ಸಹ ನೀವು 2ನೇ ಆರೋಪಿ ಮೇಲೆ ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸರಿಯಲ್ಲ. 2ನೇ ಆರೋಪಿಯು 1ನೇ ಆರೋಪಿಯ ಮೇಲೆ ಎಲ್ಲಾ ರೀತಿಯ ಕಾನೂನು ಕ್ರಮ ಕೈಗೊಂಡಿದ್ದು, ನೀವು ಪೊಲೀಸರಿಗೆ ಸರಿಯಾದ ದಾಖಲಾತಿ ನೀಡದೇ 2ನೇ ಆರೋಪಿಯನ್ನು ತಪ್ಪಿತಸ್ಥನನ್ನಾಗಿ ಮಾಡಲು ನಿಮ್ಮ ರಾಜಕೀಯ ಪ್ರಭಾವ ಬೀರಿ ದಾಖಲಾತಿಗಳನ್ನು ಮರೆಮಾಚಿರುತ್ತಿರಾ ಎಂದರೆ ಸರಿಯಲ್ಲ. ನಿಮ್ಮ ಮೇಲೆ ಇದೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸಾಕ್ಷಿ ಅದು ವಜಾ ಆಗಿರುತ್ತದೆ ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**